CW : 9

PW : 7

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

## CC No.61/2017

| | | |
|---|---|---|
| ಸಾಕ್ಷಿದಾರರ ಹೆಸರು | : | ಮೊಯಿದು ಕುನ್ಹಿ |
| ತಂದೆಯ ಹೆಸರು | : | ಸೀದಿ ಕುನ್ಹಿ |
| ಪ್ರಾಯ | : | 66 ವರ್ಷ |
| ಉದ್ಯೋಗ | | ಕೃಷಿ ಮತ್ತು ಕೂಲಿ |
| ವಾಸಸ್ಥಳ | : | ಬೆಳ್ಳಾರೆ ಗ್ರಾಮ |

ದಿನಾಂಕ:**22.07.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಸುಮಾರು 10 ವರ್ಷಗಳ ಹಿಂದೆ ನಾನು ಪುತ್ತೂರಿನಲ್ಲಿ ಬಿಎಸ್ಎನ್ಎಲ್ ಸಿಮ್ಮನ್ನು ಪಡೆದಿದ್ದೆನು. ಅದರ ಕೊನೆ ಸಂ. ಗಳು 86955 ಆಗಿತ್ತು. ಅದನ್ನು ನಾನು ಉಪಯೋಗಿಸುತ್ತಿದ್ದೆನು. ನಾನು ಮಂಳೂರಿಗೆ ಹೋಗಿ ಅಕ್ವೇರಿಯಂಗೆ ಸಂಬಂಧಿಸಿದ ಸಾಮಾನುಗಳನ್ನು ಖರೀದಿ ಮಾಡಿ ಪುತ್ತೂರು ಬಸ್ ನಿಲ್ದಾಣಕ್ಕೆ 2015 ರ ಜನವರಿಯಲ್ಲಿ ಬಂದೆನು. ಆ ದಿನ ನನ್ನ ಪರ್ಸಿನಲ್ಲಿ ಸಿಮ್ ಮತ್ತು ಹಣ ಇತ್ತು, ನಾನು ಕಂಡಕ್ಟರ್ ಗೆ ಹಣ ಕೊಡಲು ನೋಡಿದಾಗ ನನ್ನ ಹತ್ತಿರ ಇದ್ದ ಪರ್ಸ್ ಮತ್ತು ಸಿಮ್ ಎರಡೂ ಇರಲಿಲ್ಲ. ಕಳೆದುಹೋದ ನನ್ನ ಸಿಮ್ಮನ್ನು ಬ್ಲಾಕ್ ಮಾಡುವಂತೆ ಬಿಎಸ್ಎನ್ಎಲ್ ಕಚೇರಿಯವರಿಗೆ ತಿಳಿಸಿದೆನು. ಸದರಿ ಸಿಮ್ ಬ್ಲಾಕ್ ಆಯಿತಾ ಇಲ್ಲವಾ ನನಗೆ ಗೊತ್ತಿಲ್ಲ. ನನ್ನ ಸಿಮ್ ಕಳೆದುಹೋದ ಬಗ್ಗೆ ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ. 2016 ರ ಜನವರಿಯಲ್ಲಿ ನನ್ನ ಕಳೆದುಹೋದ ಸಿಮ್ಮನ್ನು ಉಪಯೋಗಿಸಿ ಹೆಣ್ಣು ಮಕ್ಕಳಿಗೆ ಯಾರೋ ಫೋನ್ ಮಾಡಿದ್ದಾರೆಂದು ಗೊತ್ತಾಯಿತು. ಫೋನ್ ಮಾಡಿದವರ ಹೆಸರು ತಿಮ್ಮಪ್ಪ ಎಂದು ತಿಳಿದುಬಂತು. ಈ ಕೇಸಿನ ಸಲುವಾಗಿ ನಾನು 2 ಬಾರಿ ಪೊ.ಠಾಣೆಗೆ ಹೋಗಿದ್ದೇನೆ. ತಿಮ್ಮಪ್ಪ ಎಂಬುವರನ್ನು ನಾನು ಪೊಟೋದಲ್ಲಿ ನೋಡಿದ್ದೆನು ಹಾಗೂ ಅವರನ್ನು ಗುರುತಿಸಬಲ್ಲೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿ ತಿಮ್ಮಪ್ಪ ಎಂಬುವರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲು: ಆರೋಪಿತರ ಪರ ವಕೀಲರಿಂದ

2015 ರಲ್ಲಿ ನನಗೆ ಬೆಳ್ಳಾರೆಯಲ್ಲಿ ಅಕ್ವೇರಿಯಂ ಅಂಗಡಿ ಇತ್ತು. ನಾನು ಹೇಳಿದ ಸಿಮ್ ನ ಸಂಪೂರ್ಣ ನಂ. 9882586955 ಎಂದರೆ ಸರಿ. 9882586955 ನಮ್ಮ ಸಿಮ್ಮ ನಂ.ಏರ್ಟೆಲ್ ಕಂಪನಿಯದಾಗಿದ್ದು ಬಿ ಎಸ್ ಎನ್ ಎಲ್ ಕಂಪನಿಗೆ ಬರುವುದಿಲ್ಲ ಎಂದರೆ ಗೊತ್ತಿಲ್ಲ. ನನ್ನ ಕಳೆದುಹೋದ ಪರ್ಸ್ನಲ್ಲಿ ಹಣ ಇತ್ತು ಮತ್ತು ಎ ಟಿ ಎಮ್ ಕಾರ್ಡ ಹಾಗೂ ಪ್ಯಾನ್ ಕಾರ್ಡ್ ಇತ್ತು. ಪರ್ಸ್ ಕಳುವಾದ ಬಗ್ಗೆ ನಾನು ಸಂಪ್ಯ

ಪೊಲೀಸ್ ಠಾಣೆಯ ಪೋಲೀಸರಿಗೆ ದೂರು ಕೊಟ್ಟಿದ್ದೇನೆ. ಈ ಕೇಸಿಗೆ ಸಂಬಂಧಿಸಿದಂತೆ ನಾನು 2 ಬಾರಿ ಪೊಲೀಸ್ ಠಾಣೆಗೆ ಹೋಗಿದ್ದೇನೆ. ನನ್ನ ಪರ್ಸ ಕಳುವಾಗಿದ್ದ ಬಗ್ಗೆ ದೂರು ಕೊಟ್ಟ ಸಂಬಂಧ ಪೊಲೀಸರಿಗೆ ತಿಳಿಸಿದ್ದೇನೆ. ನಾನು ಆ ಸಂಬಂಧಿತವಾಗಿ ಹೇಳಿಕೆ ನೀಡಿದೆಇನೆ. ನಾನು ಕೊಟ್ಟ ಹೇಳಿಕೆಯಲ್ಲಿ ಅದರ ಬಗ್ಗೆ ನಮೂದಾಗಿರುವ ಬಗ್ಗೆ ನನಗೆ ಗೊತ್ತಿಲ್ಲ.

ಸಾಮಾನ್ಯವಾಗಿ ಯಾರೂ ಕೂಡಾ ಖಾಲಿ ಸಿಮ್ಮನ್ನು ಪರ್ಸನಲ್ಲಿ ಇಡುವುದಿಲ್ಲ ಎಂದರೆ ಸರಿಯಲ್ಲ. 2015 ರಲ್ಲಿ ಒಂದು ಮೊಬೈಲ್ನಲ್ಲಿ 2 ಸಿಮ್ಮನ್ನು ಅಳವಡಿಸಬಹುದಾಗಿತ್ತು ಎಂದರೆ ಸ್ವಾಯು ನನ್ನ ಹತ್ತಿರ ಇದ ಮೊಬೈಲ್ನಲ್ಲಿ ಒಂದು ಸಿಮ್ ಮಾತ್ರ ಹಾಕಬಹುದಾಗಿತ್ತೆಂದು ನುಡಿಯತ್ತಾರೆ. 2016 ರ ಸಾಲಿನಲ್ಲಿ ನನ್ನ ಸಿಮ್ಮನ್ನು ಬ್ಲಾಕ್ ಮಾಡಲು ತಿಳಿಸಿದ್ದೆನು. ನಿರ್ದಿಷ್ಟವಾದ ದಿನಾಂಕ ನೆನಪಿಲ್ಲ. ನನ್ನ ಸಿಮ್ಮ ವ್ಯಾಲಿಡಿಟಿ ಯಾವಾಗ ಮುಕ್ತಾಯಗೊಳ್ಳುತ್ತಿತ್ತು ಎಂದು ಈಗ ಹೇಳಲಾಗುವುದಿಲ್ಲ. ತಿಮ್ಮಪ್ಪ ಎನ್ನುವವರ ಪೊಟೋವನ್ನು ಪೊಲೀಸರು ಪೋ. ಠಾಣೆಯಲ್ಲಿ ನನಗೆ ತೋರಿಸಿದರು. ಪೊಲೀಸರು ನನಗೆ ಕರೆಮಾಡಿ ನಿಮ್ಮ ನಂ.ನಿಂದ ಯಾರಿಗೆ ಕರೆ ಮಾಡಿದ್ದೀರಿ ಎಂದು ಕೇಳಿದ್ದರು. ಆಗ ನನಗೆ ಗೊತ್ತಾಯಿತು. ಸುಮಾರು 1 ವರ್ಷ ಕಳೆದ ನಂತರ ನನ್ನ ಸಿಮ್ ಕಾರ್ಡದಿಂದ ಫೋನ್ ಮಾಡಿದ್ದಾರೆ. ನನ್ನ ಸಿಮ್ ಕಾರ್ಡ್ನ ಅವಧಿ ಬಿಸಾಡಿ ಹೋದ ಸಮಯದಲ್ಲಿ 2 ತಿಂಗಳು ಇತ್ತು. ಪ್ರಥಮವಾಗಿ ಪೊಲೀಸ್ ಠಾಣೆಗೆ ನಾನು ಯಾವಾಗ ಹೋದೆನು ಎಂದು ನೆನಪಿಲ್ಲ. ಇದೇ ಪ್ರಥಮವಾಗಿ ನಾನು ತಿಮ್ಮಪ್ಪರವರನ್ನು ಮುಖತಃ ನೋಡುತ್ತಿದ್ದೇನೆ. ನಾನು ಪೊಲೀಸ್ ಠಾಣೆಯಲ್ಲಿ ಹೋದಾಗ ಏನು ಹೇಳಿಕೆ ಕೊಟ್ಟಿದ್ದೇನೆಂದು ರಈಗ ಹೇಳಲಾಗುವುದಿಲ್ಲ. ತಿಮ್ಮಪ್ಪನನ್ನು ನೋಡಿದ್ದು ಮುಂದೆ ನೋಡಿದರೆ ಗುರುತಿಸುತ್ತೇನೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ.

ನನ್ನ ಸಿಮ್ ಉಪಯೋಗಿಸಿ ಯಾರೂ ಕೂಡಾ ಫೋನ್ ಮಾಡಿಲ್ಲ ಹಾಗೂ ನಾನು ತಿಮ್ಮಪ್ಪನನ್ನು ನೋಡಿಯೇ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯನ್ನು ನಾನು ನೋಡೇ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

CW : 9

PW : 7